ಅ) ಹಾಗಿದ್ದರೆ, ಈ ತಾಲ್ಲೂಕಿನಲ್ಲಿ ಕೈಗಾರಿಕಾ ಮಳಿಗೆಗಳನ್ನು ನಿರ್ಮಿಸಲು ವಿಳಂಬವಾಗಿರುವುದಕ್ಕೆ ಕಾರಣವೇನು?

ಆ) ಈ ವಿಧಾನವನ್ನು ಕ್ರಮಬದ್ಧಗೊಳಿಸಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಈ) ಕೈಗಾರಿಕಾ ಮಳಿಗೆಗಳು ಪ್ರಾರಂಭಿಸಲ್ಪಡುವ ದಿನಾಂಕ :

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು) –

ಅ) ಹೌದು

ಆ) ಸೂಕ್ತವಾದ ಜಮೀನು ದೊರಕದಿದ್ದ ಕಾರಣ.

ಇ) 22.37 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ತಗಚಗೆರೆಯಲ್ಲಿ ಸ್ವಾಧೀನಪಡಿಸಿಕೊಳ್ಳಲು ಸರ್ಕಾರದ ಉದ್ದೇಶದ ಮೇರೆಗೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮುಚ್ಚಲ್ಪಟ್ಟಿರುವ ಕಾರ್ಖಾನೆಗಳ ಸಂಖ್ಯೆ

1261. ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) :– ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) 1989 ರಿಂದ ರಾಜ್ಯದಲ್ಲಿ ಎಷ್ಟು ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ ಮತ್ತು ಈ ಕಾರ್ಖಾನೆಗಳನ್ನು ಮುಚ್ಚಿರುವುದರಿಂದ ಎಷ್ಟು ಜನ ಕಾರ್ಮಿಕರು ನೌಕರಿ ಕಳೆದುಕೊಂಡಿದ್ದಾರೆ ;

ಆ) ರಾಜ್ಯದಲ್ಲಿರುವ ಒಟ್ಟು ಕಾರ್ಖಾನೆಗಳೆಷ್ಟು, ಮತ್ತು ಈ ಕಾರ್ಖಾನೆಗಳಲ್ಲಿನ ಕಾರ್ಮಿಕರೆಷ್ಟು ;

ಇ) ಈ ಕಾರ್ಖಾನೆಗಳನ್ನು ಪುನಃ ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) –

ಅ) ಮುಚ್ಚಿರುವ ಕಾರ್ಖಾನೆಗಳು - 6, ನೌಕರಿ ಕಳೆದುಕೊಂಡ ಕಾರ್ಮಿಕರು - 2550

ಆ) 7,451 (ದಿನಾಂಕ 31.12.91 ರವರೆಗೆ) ಕಾರ್ಖಾನೆಗಳು, 7,70,586 ಕಾರ್ಮಿಕರು.

ಇ) ಈ ಕಾರ್ಖಾನೆಗಳ ಮುಚ್ಚುವಿಕೆ ಮತ್ತು ಇತರೆ ಕೆಲವು ವಿಷಯಗಳ ಕಾರ್ಮಿಕ ವಿವಾದಗಳಿದ್ದು ಅವುಗಳನ್ನು ನ್ಯಾಯ ನಿರ್ಣಯಕ್ಕಾಗಿ ಕಾರ್ಮಿಕ ನ್ಯಾಯಾಲಯಗಳಿಗೆ ಈಗಾಗಲೇ ಒಪ್ಪಿಸಲಾಗಿದೆ. ಈ ಕಾರ್ಖಾನೆಗಳ ಪುನರಾರಂಭದ ವಿಷಯವು ನವದೆಹಲಿಯ ಬಿ.ಐ.ಎಫ್.ಆರ್. ಮುಂದೆ ಇದ್ದು ಅವರ ತೀರ್ಮಾನವನ್ನು ನಿರೀಕ್ಷಿಸಲಾಗಿದೆ.

ಮಹಿಳೆಯರಿಗೆ ಉದ್ಯೋಗ ಯೋಜನೆಗಳ ಸಂಖ್ಯೆ

1262. ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಲ್ಲಿ ಮಹಿಳಾ ಕಲ್ಯಾಣ ಉದ್ಯೋಗ ಯೋಜನೆಗಳ ಸಂಖ್ಯೆ ಎಷ್ಟು? ವಿವರಗಳನ್ನು ಒದಗಿಸುವುದು ;

ಆ) ರಾಜ್ಯದಲ್ಲಿರುವ ಗ್ರಾಮೀಣ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಗಳು ಮತ್ತು ಕೇಂದ್ರ ಸರ್ಕಾರದ ಮಾದರಿ ಕೈಗಾರಿಕಾ ಕೇಂದ್ರಗಳ ಬಗ್ಗೆ ವಿವರ ಒದಗಿಸುವುದು.

ಇ) ಸ್ತ್ರಿ ಶಕ್ತಿಯನ್ನು ಉಪಯೋಗಿಸಿಕೊಂಡು ಗೃಹೋಪಯೋಗಿ ಸಾಮಗ್ರಿಗಳ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಮಹಿಳೆಯರಿಗೆ ಬೇರೆ ಉದ್ಯೋಗ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆಯೇ? ಹಾಗಿದ್ದಲ್ಲಿ, ವಿವರಗಳನ್ನು ಒದಗಿಸಿ.